**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ 1, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಮಂಗಲಾ ನಾಯ್ಕು |
| ಗಂಡನ ಹೆಸರು | ವಿಜಯ ನಾಯ್ಕು |
| ವಯಸ್ಸು | 56 ವರ್ಷಗಳು |
| ಉದ್ಯೋಗ | ಮನೆಕೆಲಸ |
| ವಾಸ್ತವ್ಯ | ಚಂದಾವರ |

**ಸಾಕ್ಷಿಯನ್ನು ದಿನಾಂಕಃ 10-11-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಚಂದಾವರ ಗ್ರಾಮದಲ್ಲಿರುವ ನಮ್ಮ ವಾಸದ ಮನೆಯಲ್ಲಿ ನಾನು ಮತ್ತು ನನ್ನ ಗಂಡ ವಾಸವಾಗಿರುತ್ತೇವೆ. ನನ್ನ ಮಕ್ಕಳು ಬೆಂಗಳೂರಿನಲ್ಲಿ ಕೆಲಸದಲ್ಲಿ ಇದ್ದು ಅಲ್ಲಿಯೇ ವಾಸ ಮಾಡುತ್ತಾರೆ.

ನಮ್ಮ ಊರಿನಲ್ಲಿ ಬಂಡಿಹಬ್ಬ ಇದ್ದದ್ದರಿಂದ ಹಬ್ಬಕ್ಕೆ ದಿನಾಂಕ 06-05-2019 ರಂದು ನನ್ನ ಮಗನಾದ ಚಾಸಾ-8 ಅತಿಥ ಮತ್ತು ಚಾಸಾ-9 ಉಮಾ ಬಂದಿದ್ದರು. ಸದರಿ ದಿನದಂದು ನನ್ನ ಅಕ್ಕನ ತಂಗಿಯಾದ ವೀಣಾ ನಾಯ್ಕರವರು ಬಂದು ಮನೆ ಕಟ್ಟುವ ಸಲುವಾಗಿ ಚಾಸಾ-9 ಉಮಾರವರಿಗೆ ರೂ.70,000-00 ಹಣ ನೀಡಿದ್ದರು. ಸದರಿ ಹಣವನ್ನು ಚಾಸಾ-9 ಮನೆಗೆ ಹೋಗುವ ಸಂದರ್ಭದಲ್ಲಿ ವಾಪಸ್ಸು ಕೊಡು ಎಂದು ಹೇಳಿ ನನಗೆ ಕೊಟ್ಟಿದ್ದರು. ನಾನು ಸದರಿ ಹಣವನ್ನು ಎಣಿಸಿ ನಮ್ಮ ಮನೆಯಲ್ಲಿದ್ದ ಗೊದ್ರೇಜ್ ಬೀರುವಿನಲ್ಲಿ ಇಟ್ಟಿದ್ದೆ. ಸದರಿ ಗೋದ್ರೇಜ್ ಬೀರುವಿನ ಬೀಗ ಹಾಕಿರಲಿಲ್ಲ.

ರಾತ್ರಿ 08-15 ರ ಸಮಯಕ್ಕೆ ಕೊಂಡೋತ್ಸವ ನೋಡಲು ಮನೆಯ ಮುಂದಿನ ಬಾಗಿಲಿಗೆ ಬೀಗ ಹಾಕಿ ಎಲ್ಲರೂ ದೇವಸ್ಥಾನದ ಬಳಿ ಹೋಗಿದ್ದೆವು. ರಾತ್ರಿ 09-15 ರ ಸಮಯಕ್ಕೆ ಮನೆಗೆ ಬಂದು ನೋಡಲಾಗಿ ಮನೆಯ ಮುಂಬಾಗಿಲಿಗೆ ಹಾಕಿದ್ದ ಬೀಗ ಇರಲಿಲ್ಲ. ಬಾಗಿಲು ಮುಚ್ಚಿದ ಸ್ಥಿತಿಯಲ್ಲಿ ಇತ್ತು. ನಾವು ಒಳಗೆ ಹೋಗಿ ಕಾಪಟನ್ನು ನೋಡಲಾಗಿ ಬಟ್ಟೆಯೆಲ್ಲ ಚೆಲ್ಲಾಪಿಲ್ಲಿಯಾಗಿತ್ತು. ನಾನು ಇಟ್ಟಿದ್ದ ಹಣ ಇರಲಿಲ್ಲ. ಕಪಾಟಿನ ಸ್ವಲ್ಪ ದೂರದಲ್ಲಿ ಫ್ರಿಡ್ಜಿನ ಮೇಲೆ ಇಟ್ಟಿದ್ದ ಕಿವಿಯ ಕುಡುಕುಗಳು ಇರಲಿಲ್ಲ. ಎಲ್ಲಾ ಕಡೆ ಹುಡುಕಿದರೂ ಸಹ ಹಣ ಮತ್ತು ಕುಡುಕುಗಳು ಸಿಗಲಿಲ್ಲ. ನಂತರ ಪೋಲಿಸರಿಗೆ ಕರೆ ಮಾಡಿದ್ದು ಅದೇ ದಿನ ರಾತ್ರಿ ಪೋಲಿಸರು ನಮ್ಮ ಮನೆಗೆ ಬಂದಿದ್ದರು. ಪೋಲಿಸರು ನಮ್ಮನ್ನು ವಿಚಾರಣೆ ಮಾಡಿ ಪಿರ್ಯಾದು ಕೊಡಲು ಹೇಳಿರುತ್ತಾರೆ. ಮಾರನೇ ದಿನ ಬೆಳಿಗ್ಗೆ ಠಾಣೆಗೆ ಹೋಗಿ ಪಿರ್ಯಾದು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-5 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಪಿರ್ಯಾದು ನೀಡಿದ ನಂತರ ಪೋಲಿಸರು ನಮ್ಮ ಮನೆಗೆ ಶ್ವಾನದಳ ತೆಗೆದುಕೊಂಡು ಬಂದಿದ್ದರು. ಆ ಸಂದರ್ಭದಲ್ಲಿ ಚಾಸಾ-2 ಮತ್ತು 3 ಸಹ ಹಾಜರಿದ್ದರು. ಪೋಲಿಸರಿಗೆ ಸ್ಥಳವನ್ನು ನಾನು ತೋರಿಸಿದ್ದು ಅವರು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಕಚ್ಚಾ ನಕಾಶೆ ತಯಾರಿಸಿ

ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ. ಪಂಚನಾಮೆ ಮತ್ತು ಕಚ್ಚಾ ನಕಾಶೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿ-1 ಮತ್ತು 2ರ ಮೇಲಿನ ತನ್ನ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4ರಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ.

ದಿನಾಂಕ 04-08-2020ರಂದು ಪೋಲಿಸರು ಇಬ್ಬರು ವ್ಯಕ್ತಿಗಳನ್ನು ನಮ್ಮ ಮನೆಯ ಬಳಿ ಕರೆತಂದಿದ್ದರು. ಅವರು ನಮ್ಮ ಮನೆಯಲ್ಲಿ ಯಾವ ರೀತಿ ಕಳ್ಳತನ ಮಾಡಿದೆವು ಎನ್ನುವುದನ್ನು ತೋರಿಸಿರುತ್ತಾರೆ. ಸದರಿಯವರು ಕಳ್ಳತನ ಮಾಡಿದ ವಸ್ತುಗಳನ್ನು ಏನು ಮಾಡಿದರು ಎನ್ನುವುದನ್ನು ಹೇಳಿರುವುದಿಲ್ಲ. ಆ ಸಂದರ್ಭದಲ್ಲಿ ಪೋಲಿಸರು ಬರವಣಿಗೆ ಮಾಡಿರುತ್ತಾರೆ.

ಮಾರನೇ ದಿನ ಪೋಲಿಸರು ನನ್ನನ್ನು ಠಾಣೆಗೆ ಕರೆದಿದ್ದರು. ಆಗ ಪೋಲಿಸರು ಕುಡುಕುಗಳನ್ನು ತೋರಿಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಈ ಪ್ರಕರಣದಲ್ಲಿ ಹಾಜರು ಮಾಡಿರುವ ಒಂದು ಜೊತೆ ಕಿವಿಯೋಲೆಯನ್ನು ಗುರುತಿಸಿದ್ದರಿಂದ ಅವುಗಳನ್ನು ಮುಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಕಿವಿಯೋಲೆಯನ್ನು ನಾವು ಕುಡುಕು ಎಂದು ಕರೆಯುತ್ತೇವೆ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ರಾತ್ರಿ ಮನೆಗೆ ಬಂದ ನಂತರ ಹಣ ಮತ್ತು ಆಭರಣವನ್ನು ಇಟ್ಟಿದ್ದ ರೂಮಿಗೆ ಮೊದಲು ನಾನೇ ಹೋಗಿರುತ್ತೇನೆ. ಹಣವನ್ನು ರಬ್ಬರ್ ಬ್ಯಾಂಡ್ ಹಾಕಿ ಹಾಗೇ ಇಟ್ಟಿದ್ದೆ. ಚಾಸಾ-9ರವರ ಸಹೋದರಿ ಹಣವನ್ನು ಚಾಸಾ-9ರವರಿಗೆ ನೀಡಿಲ್ಲ, ಚಾಸಾ-9 ರವರು ಹಣವನ್ನು ನನಗೆ ನೀಡಿಲ್ಲ ಮತ್ತು ಅದನ್ನು ಬೀರುವಿನಲ್ಲಿ ಇಟ್ಟಿರಲಿಲ್ಲ ಎಂದರೆ ಸರಿಯಲ್ಲ.

ಮುಮಾ-1 ಕುಡುಕು ನನ್ನದ್ದೇ ಆಗಿತ್ತು. ನಮ್ಮ ಮನೆಯಿಂದ ಮುಮಾ-1 ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ-3 ನನ್ನ ಬಾವ ಅಂದರೆ ನನ್ನ ಅಕ್ಕನ ಗಂಡ. ಚಾಸಾ-2 ನಮ್ಮ ಮನೆಯ ಪಕ್ಕದವರು ಎಂದರೆ ಸರಿ. ಮರುದಿನ ಪೋಲಿಸರು ಸ್ಥಳಕ್ಕೆ ಬಂದಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2ರ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 04-08-2020ರಂದು ನಮ್ಮ ಮನೆಗೆ ಇಬ್ಬರು ಕಳ್ಳರು, ಪೋಲಿಸರು ಮತ್ತು ಇತರರು ಸೇರಿ ಒಟ್ಟು 10 ರಿಂದ 15 ಜನ ಬಂದಿದ್ದರು. ಆರೋಪಿಗಳಿಗೆ ಪೋಲಿಸರು ಬೇಡಿಯನ್ನು ಹಾಕಿ ತಂದಿದ್ದರು. ಆರೋಪಿಗಳು ಕಳ್ಳರು ಎಂದು ಪೋಲಿಸರೇ ಹೇಳಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಆಗಿರುವ ಕಳ್ಳತನಕ್ಕೆ ಮತ್ತು ಆರೋಪಿಗಳಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 04-08-2020ರಂದು ಪೋಲಿಸರು ಆರೋಪಿಗಳನ್ನು ನಮ್ಮ ಮನೆಯ ಬಳಿ ಕರೆತಂದಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**